

# ‘ಮೂವರು ಮೂರ್ಖರ’ ಕರಾಮತ್ತು!

ಇಡೀ ವರ್ಷ ಬಾಲಿವುಡ್ ಕಳೆದುಕೊಂಡ ಹಣದ ಲೆಕ್ಕಾಚಾರದ ದುಃಖದಲ್ಲಿದ್ದಾಗಲೇ ‘ಮೂವರು ಮೂರ್ಖರು’ ಬಾಕ್ಸಾಫೀಸ್ ಪಂಡಿತರ ಲೆಕ್ಕಾಚಾರವನ್ನೆಲ್ಲ ತಲೆಕೆಳಗು ಮಾಡಿದ್ದಾರೆ. ಅಮೀರ್‌ಖಾನ್ ವರ್ಷದ ಕೊನೆಯಲ್ಲಿ ಬಂಪರ್ ಬೆಳೆ ತೆಗೆದಿದ್ದಾರೆ. ‘ತ್ರೀ ಈಡಿಯಟ್ಸ್’ ಎಂಬ ಅವರ ಚಿತ್ರ ಪ್ರೇಕ್ಷಕರಲ್ಲಿ ಎಂತಹ ಹುಚ್ಚೆಬ್ಬಿಸಿದೆ ಎಂದರೆ, ಬಿಡುಗಡೆಯಾದ ಮೊದಲ ವಾರದಲ್ಲಿಯೇ 97 ಕೋಟಿ ರೂಪಾಯಿಗೂ ಹೆಚ್ಚು ಕಲೆಕ್ಷನ್ ಆಗಿದ್ದು, ಹೊಸ ದಾಖಲೆ ಬರೆದಿದೆ.

ವರ್ಷದ ಕೊನೆಯಲ್ಲಿ ಬಿಡುಗಡೆಯಾದ ಹಾಲಿವುಡ್‌ನ ‘ಅವತಾರ್’ ಎಂಬ ಟೂ–ಡಿ, ಥ್ರೀ–ಡಿ ಚಿತ್ರದ್ದೇ ಭಾರೀ ಕಲೆಕ್ಷನ್ ದಾಖಲೆ ಎಂದು ಬೀಗುತ್ತಿದ್ದವರೂ ಮೂಗಿನ ಮೇಲೆ ಬೆರಳೇರಿಸಿಕೊಳ್ಳುವಂತೆ ತ್ರೀ ಈಡಿಯಟ್ಸ್ ದುಡ್ಡು ದೋಚಿದ್ದಾರೆ. ಈ ಹಿಂದೆ ಅಮೀರ್‌ಖಾನ್‌ನ ಗಜನಿ ಚಿತ್ರ ನಿರ್ಮಿಸಿದ್ದ ಮೊದಲ ವಾರದ ಕಲೆಕ್ಷನ್ ದಾಖಲೆಯನ್ನೂ ತ್ರೀ ಈಡಿಯಟ್ಸ್ ಮುರಿದಿಕ್ಕಿದೆ.

ವರ್ಷವಿಡೀ ಬಾಲಿವುಡ್ ಹಲವು ಸಂಕಟಗಳಿಂದ ತತ್ತರಿಸಿತ್ತು. ನಿರ್ಮಾಪಕರ ಮುಷ್ಕರ, ಐಪಿಎಲ್ ಕ್ರಿಕೆಟ್‌ಗಳ ಹೊಡೆತದ ಮಧ್ಯೆ ಆರ್ಥಿಕ ಹಿಂಜರಿತದ ಬಿಸಿಯೂ ಬಾಲಿವುಡ್ ಉದ್ಯಮವನ್ನು ಮಂಕುಗೊಳಿಸಿತ್ತು. ಏಳೆಂಟು ಚಿತ್ರಗಳ ಲಾಭ ಗಳಿಕೆ ಬಿಟ್ಟರೆ ಎಲ್ಲವೂ ನಷ್ಟದ ಬಾಬತ್ತು ಎಂದೇ ಪರಿಗಣಿಸಲಾಗಿತ್ತು. ಈಗ ತ್ರೀ ಈಡಿಯಟ್ಸ್ ದಾಖಲೆ ಉದ್ಯಮಕ್ಕೂ ಹೊಸ ವರ್ಷಾರಂಭದಲ್ಲಿ ಹೊಸ ಹುಮ್ಮಸ್ಸು ತುಂಬಿದೆ.

# ಕತ್ರೀನಾ ಅತಂತ್ರ

ಕತ್ರೀನಾ ಕೈಫ್ ಚಿತ್ರಜೀವನ ಮುಗೀತು ಅನ್ನೋದು ಬಾಲಿವುಡ್‌ನ ಹೊಸ ಬಾಂಬ್! ಸಲ್ಮಾನ್ ಖಾನ್‌ಗೆ ಕೈಕೊಟ್ಟು ರಣಬೀರ್ ಕಪೂರನ ಹಿಂದೆ ಬಿದ್ದಿರುವ ಕತ್ರೀನಾಳ ಅವಕಾಶಗಳಿಗೆಲ್ಲ ಸಲ್ಲೂ ಭಾಯ್ ಕತ್ತರಿ ಹಾಕುತ್ತಿದ್ದಾನೆಂದು ಬಾಲಿವುಡ್‌ನಲ್ಲಿ ಗುಲ್ಲೋ ಗುಲ್ಲು!

ಡಿಸೆಂಬರ್ ಕೊನೆ ವಾರದಲ್ಲಿ ಲಂಡನ್ನಿನಿಂದ ನ್ಯೂಯಾರ್ಕಿಗೆ ಹಾರಿರುವ ಕತ್ರೀನಾ, ಅಲ್ಲಿ ಶೂಟಿಂಗ್‌ನಲ್ಲಿ ತೊಡಗಿರುವ ರಣಬೀರ್ ಜತೆ ಸಖತ್ ತಿರುಗಾಟ ನಡೆಸಿದ್ದಾಳಂತೆ. ಇದು ಸಲ್ಲೂ ಭಾಯ್ ಕಣ್ಣು ಕೆಂಪಗಾಗಿಸಿದೆ. ಹೀಗಾಗಿಯೇ ಕತ್ರೀನಾ ನಟಿಸಬೇಕಿದ್ದ ಅಕ್ಷಯ್ ಕುಮಾರ್‌ನ ಹೊಸ ಚಿತ್ರ ‘ತೀಸ್ ಮಾರ್ ಖಾನ್’ ನಿಂದ ಆಕೆಯನ್ನು ಕಿತ್ತು ಹಾಕಲಾಗಿದೆಯಂತೆ. ಆ ಚಿತ್ರದ ಹೊಸ ನಾಯಕಿಯಾಗಿ ಸೋನಂ ಕಪೂರ್ ಆಯ್ಕೆ ಆಗಿದ್ದಾಳೆ. ಸದ್ಯಕ್ಕೆ ಕತ್ರೀನಾ ಕೈಯಲ್ಲಿ ಒಂದೂ ಚಿತ್ರ ಇಲ್ಲವಂತೆ.





# ಕರೀನಾ ಖುಷ್

ತ್ರೀ ಈಡಿಯಟ್ಸ್ ಚಿತ್ರದ ನಾಯಕಿ ಕರೀನಾ ಕಪೂರ್ ಅಂತೂ ದಿಲ್‌ಖುಷ್ ಆಗಿ ಓಡಾಡುತ್ತಿದ್ದಾಳೆ. ಈ ಚಿತ್ರದ ಯಶಸ್ಸಿನಿಂದ ಆಕೆಗೆ ಇನ್ನಷ್ಟು ಹೊಸ ನಿರ್ಮಾಪಕರ ಫೋನ್‌ಕಾಲ್‌ಗಳು ಬಂದಿವೆಯಂತೆ. ಚಿತ್ರದ ಪ್ರಚಾರಕ್ಕಾಗಿ ವ್ಯಾಪಕ ಪ್ರವಾಸ ಮಾಡಿ ಸುಸ್ತಾಗಿರುವ ಕರೀನಾ ಕ್ರಿಸ್ಮಸ್ ಮತ್ತು ಹೊಸ ವರ್ಷಾಚರಣೆಯನ್ನು ಮಮ್ಮಿ ಮತ್ತು ಅಕ್ಕ ಕರಿಷ್ಮಾ ಕುಟುಂಬದ ಜತೆಗೆ ಆಚರಿಸಲು ದಿಲ್ಲಿಗೇ ಧಾವಿಸಿದ್ದಳು.

ಹೊಸ ಚಿತ್ರದ ಹಿಟ್ ಜತೆಗೆ ಎಲ್ಲ ಮೂವರು ಖಾನ್‌ಗಳ ಜತೆಗೂ ನಟಿಸಿದ ಕೀರ್ತಿ ಕರೀನಾಗೆ ಲಭಿಸಿದೆ. ನಾಲ್ಕನೆಯ ಖಾನ್ ಸೈಫ್ ಅಂತೂ ಮನೆಯಲ್ಲೇ ಇರೋದರಿಂದ ಕರೀನಾ ಈಗ ಖಾನ್‌ದಾನ್ ಲಡ್ಕಿ ಎನ್ನಲಡ್ಡಿಯಿಲ್ಲ!

–ಬಿಂದು